<u>ಅಸಲು ದಾವಾ ಸಂಖ್ಯೆ **-179/2020**</u> ಡಿ.ಡಬ್ಲ್ಯೂ**:-1**

ದಿನಾಂಕಃ **14.11.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ವಾದಿ ಪರ ವಕೀಲರಿಂದ :-</u>

ವಾದಿ ಗೊತ್ತು. ವಾದಿಯು ಬಿದರಹಳ್ಳಿ ಗ್ರಾಮದ ವಾಸಿ. ಪ್ರತಿವಾದಿ 2 ನನ್ನ ಹೆಂಡತಿ, 3 ನೇ ಪ್ರತಿವಾದಿ ನನ್ನ ಮಗ. ನನಗೆ ಸಂತೋಷ ಮತ್ತು ಅಕ್ಷತಾ ಎಂಬ ಇನ್ನು ಇಬ್ಬರೂ ಮಕ್ಕಳು ಸಹ ಇರುತ್ತಾರೆ. ವಾದಿಯು ನಮ್ಮ ವಿರುದ್ಧ ಜಮೀನಿಗೆ ಸಂಬಂಧಿಪಟ್ಟಂತೆ ದಾವೆಯನ್ನು ಸಲ್ಲಿಸಿದ್ದಾರೆ. ವಾದಿ ನಮ್ಮ ಊರಿನಲ್ಲಿ ಬಹಳ ವರ್ಷದಿಂದ ವಾಸವಾಗಿದ್ದಾರೆ. ವಾದಿಯು ನನಗೆ ಪೂರ್ವದಿಂದಲೂ ಸ್ನೇಹಿತರು. ಸಾಕ್ಷಿಯು ನಿಪಿ-1 ರಲ್ಲಿ ತನ್ನ ಮತ್ತು ತನ್ನ ಹೆಂಡತಿಯ ಎರಡು ಸಹಿಗಳನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು ಅವುಗಳನ್ನು ನಿಪಿ-1(ಡಿ) ಮತ್ತು (ಇ) ಎಂದು ಗುರುತಿಸಲಾಯಿತು. ಸರ್ವೇ ನಂ.25/2 ರಲ್ಲಿ ಒಟ್ಟು 5 ಎಕರೆ 36 ಗುಂಟೆ ಜಮೀನು ಇರುತ್ತದೆ. ಅದರಲ್ಲಿ ಕರಾಬು ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯು ನನಗೆ ನಮ್ಮ ಅಜ್ಜನಾದ ಛತ್ರಾನಾಯ್ಕರವರಿಂದ ಬಂದಿರುತ್ತದೆ. ಸದರಿ ಆಸ್ತಿಯು ನಮ್ಮ ಅಜ್ಜನಿಂದ ನನ್ನ ಹೆಸರಿಗೆ ಪೌತಿ ಖಾತೆಯ ಆಧಾರದ ಮೇಲೆ ಬಂದಿರುತ್ತದೆ. ಸರ್ವೇ ನಂ.25/2 ರಲ್ಲಿ ಒಟ್ಟು 6 ಎಕರೆ 4 ಗುಂಟೆ ಜಮೀನು ಇದ್ದು ಅದರಲ್ಲಿ 4 ½ ಗುಂಟೆ ಎ ಕರಾಬು ಮತ್ತು 3 ½ ಗುಂಟೆ ಬಿ ಕರಾಬು ಜಮೀನು ಇದೆ ಎಂದರೆ ಸರಿಯಲ್ಲ. ಈಗ ಸರ್ವೇ ನಂ.25/2 ರಲ್ಲಿ ನನ್ನ ಹೆಸರಿಗೆ 3 ಎಕರೆ 37 ಗುಂಟೆ ಜಮೀನು ಇರುತ್ತದೆ. ಸರ್ವೇ ನಂ.25/2 ರಲ್ಲಿ 1 ಎಕರೆ ಜಮೀನನ್ನು ಸುಮಾಬಾಯಿರವರಿಗೆ ಮತ್ತು 36 ಗುಂಟೆ ಜಮೀನನ್ನು ನನ್ನ ಮಾವನಾದ ಜಯನಾಯ್ಕರವರಿಗೆ ಮಾರಾಟ ಮಾಡಿದ್ದೇನೆ. ಗಿರೀಶ್ ನಾಯ್ಕನ ಹೆಂಡತಿ ನಿರ್ಮಲಾಬಾಯಿರವರಿಗೆ 2 ಗುಂಟೆ ಜಮೀನನ್ನು ಮಾರಾಟ ಮಾಡಿದ್ದೇನೆ. ನನಗೆ ಮನೆಯಲ್ಲಿ ಆರ್ಥಿಕ ಸಮಸ್ಯೆ ಆದ ಸಮಯದಲ್ಲಿ ಸರ್ವೇ ನಂ.25/2 ರಲ್ಲಿ ಜಮೀನನ್ನು

ಆಗಾಗ್ಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿ. 2018 ನೇ ಸಾಲಿನಲ್ಲಿ ವಾದಿಗೆ ನಾನು 24 ಗುಂಟೆ ಜಮೀನನ್ನು ಮಾರಾಟ ಮಾಡಲು ಒಪ್ಪಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನಿಗೆ ಕ್ರಯದ ಕರಾರು ಮೊಬಲಗು ರೂ.1,50,000/- ನಿಗದಿಯಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯಿಂದ ನಾನು ರೂ.20,000/- ಹಣವನ್ನು ಮಾತ್ರ ಸಾಲವಾಗಿ ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಲದ ಹಣಕ್ಕೆ ಪ್ರಾಮಿಸರಿ ನೋಟನ್ನು ಬರೆದುಕೊಡುತ್ತಾರೆ ಎಂದರೆ ಸರಿ. ನಿಪಿ-1 ರ ದಾಖಲೆಯ ಆಧಾರದ ಮೇಲೆ ರೂ.1,40,000/- ಹಣವನ್ನು ಮುಂಗಡವಾಗಿ ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ವಾದಿಗೆ ನಿಪಿ-1 ದಾಖಲೆಯನ್ನು ಸಾಕ್ಷಿಗಳ ಸಮಕ್ಷಮ ಬರೆದುಕೊಟ್ಟಿದ್ದೀರಿ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕ್ರಯದ ಕರಾರು ಪತ್ರ ಎಂದು ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿ ನನ್ನ ಮಗ ಐ ಟಿ ಐ ವಿದ್ಯಾಭ್ಯಾಸ ಮಾಡುತ್ತಿದ್ದಾನೆ ಎಂದರೆ ಸರಿ. ನಿಪಿ-1 ರ 5 ಮತ್ತು 6 ನೇ ಪುಟದಲ್ಲಿರುವ ತನ್ನ, ಪ್ರತಿವಾದಿ 2 ಮತ್ತು 3 ರವರ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರಗಳನ್ನು ಹೊನ್ನಾಳಿ ಉಪನೋಂದಣಿ ಕಚೇರಿಯಲ್ಲಿ ತೆಗೆದಿರುತ್ತಾರೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.